ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು

327 : (285)

ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ.ಲೇಔಟ್)

ಪ್ರಶ್ನೆ

ಅ) ರಾಜ್ಯದಲ್ಲಿರುವ ಖಾಸಗಿ ಕಂಪನಿಗಳೆಷ್ಟು;

ಆ) ಇವುಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ಎಷ್ಟು;

ಇ) ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ–ಮೀಸಲಾತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮುರುಗೇಶ್ ಆರ್. ನಿರಾಣಿ
(ಮಾನ್ಯ ಸಣ್ಣ ಕೈಗಾರಿಕಾ ಸಚಿವರು)

ಉತ್ತರ

ಅ) ರಾಜ್ಯದಲ್ಲಿ 4,46,811 ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ 904 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ನೋಂದಣಿಯಾಗಿರುತ್ತವೆ. ಅವುಗಳಲ್ಲಿ 2006–07ರಲ್ಲಿ ನಡೆದ 4ನೇ ಅಖಿಲ ಭಾರತೀಯ ಸಣ್ಣ ಕೈಗಾರಿಕೆಗಳ ಗಣತಿ ವರದಿಯನ್ವಯ 2211 ಖಾಸಗಿ ಕಂಪನಿಗಳು ನೋಂದಣಿಯಾಗಿರುತ್ತವೆ.

There are 4,46,811 Micro & Small Industries and 904 Large and Medium Scale Industries registered in the state. Out of this, as per All India Census Report of Small Scale Industries conducted during 2006-07, 2211 Private Companies have been registered.

ಆ) ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಂದ 25,98,654 ಜನರಿಗೂ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಂದ 4,21,416 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿರುತ್ತವೆ.

Micro & Small Industries have provided employment to 25,98,654 persons and Large and Medium Scale Industries provided employment to 4,21,416 persons.

ಇ) ಡಾ: ಸರೋಜಿನಿ ಮಹಿಷಿ ಸಮಿತಿ ವರದಿಯನ್ವಯ 50 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಘಟಕಗಳ ಎ.ಬಿ.ಸಿ.ಡಿ ವರ್ಗಗಳಲ್ಲಿ ಕ್ರಮವಾಗಿ ಶೇ–65, ಶೇ–80, ಶೇ–100, ಶೇ–100

ಕನ್ನಡಿಗರಿಗೆ/ಸ್ಥಳೀಯರಿಗೆ ನಿಯಮಾನುಸಾರ ನಿಗಧಿಪಡಿಸಿದಂತೆ ಉದ್ಯೋಗ ನೀಡಲು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮತ್ತು ರಾಜ್ಯ ಮಟ್ಟದ ಉನ್ನತಮಟ್ಟದ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿಯನ್ನು ನೀಡುವ ಸಂದರ್ಭದಲ್ಲಿ ಡಾ: ಸರೋಜಿನಿ ಮಹಿಷಿ ವರದಿಯನ್ವಯ ಉದ್ಯೋಗಾವಕಾಶವನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನಿಯಮಾನುಸಾರ ನೀಡಲು ಷರತ್ತನ್ನು ವಿಧಿಸಲಾಗುತ್ತಿದೆ.

ಡಾ: ಸರೋಜಿನಿ ಮಹಿಷಿ ವರದಿಯ ವ್ಯಾಪ್ತಿಯಡಿ ಜಿಲ್ಲೆಗಳಲ್ಲಿ ಅಸ್ಥಿತ್ವದಲ್ಲಿರುವ 50 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಕೈಗಾರಿಕಾ ಘಟಕಗಳಲ್ಲಿ ಡಾ: ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ, ಪ್ರತಿ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಕನ್ನಡಿಗರಿಗೆ/ಇತರರಿಗೆ ನೀಡಿರುವ ಉದ್ಯೋಗದ ಮಾಹಿತಿಯನ್ನು ಪ್ರತಿ ತ್ರೈಮಾಸಿಕಕ್ಕೆ ಸಂಗ್ರಹಿಸಿ ಕ್ರೋಡೀಕೃತ ವರದಿಯನ್ನು ಸರ್ಕಾರಕ್ಕೆ ಕಳುಹಿಸಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ, ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಏಕಗವಾಕ್ಷಿ ಸಮಿತಿ ಸಬೆಗಳಲ್ಲಿ ಹಾಗೂ ರಾಜ್ಯ ಮಟ್ಟದ ಡಾ: ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸು ಅನುಷ್ಠಾನ ಪರಿಶೀಲನಾ ಸಮಿತಿ ಸಭೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ–ಮೀಸಲಾತಿ ನೀಡುವ ಕುರಿತು ನಿರಂತರವಾಗಿ ಪರಿಶೀಲಿಸಲಾಗುತ್ತಿದೆ.

The Small, Medium, Large & Mega industries, having 50 and more than 50 employees, are required to provide employment to Kannadigas/Locals as per Dr.Sarojini Mahishi Report is as follows.

Category 'A' 65%, Category 'B' 80% Category 'C & D 100%

While clearing new projects, conditions are imposed on the units to provide employment to Kannadigas/Local employees as per Dr.Sarojini Mahesh Report.

As per Dr.Sarojini Mahishi Report, the quarterly employment details are obtained from units employing 50 & more than 50 employees through the District Industries

Centre's and consolidated report is submitted to the Government, once in a quarter.

This is reviewed at the District Level SWA meeting, State Level SWA Committee & State Level Dr.Sarojini Mahesh Review Committee.

ಕುಡಿಯುವ ನೀರಿನ ತೊಂದರೆ

297 : (434)

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್

ಪ್ರಶ್ನೆ

ಅ) ಜಮಖಂಡಿ ತಾಲ್ಲೂಕಿನ ಹಿಪ್ಪರಗಿಯಿಂದ ಗಲಗಲಿಯವರೆಗೆ ಕೃಷ್ಣಾ ನದಿಯಲ್ಲಿ ಬೇಸಿಗೆಯಲ್ಲಿ ನೀರು ಸಂಪೂರ್ಣ ಖಾಲಿಯಾಗಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;

ಆ) ಹಾಗಿದ್ದಲ್ಲಿ, ಗಲಗಲಿ ಬ್ಯಾರೇಜನ್ನು ಎರಡು ಮೀಟರ್ ಎತ್ತರಿಸಬೇಕಂಬ ಬೇಡಿಕೆಯ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು;

ಇ) ಅದಕ್ಕೆ ತಗಲುವ ಅಂದಾಜು ವೆಚ್ಚದ ತಖ್ತೆ ತಯಾರಿಸಿ ಮಂಜೂರಾತಿ ನೀಡಲಾಗಿದೆಯೇ; ಅದು ಯಾವ ಹಂತದಲ್ಲಿದೆ;

ಈ) ಬ್ಯಾರೇಜ್ ಎತ್ತರಿಸುವ ಕಾರ್ಯವನ್ನು ತಕ್ಷಣ ಪ್ರಾರಂಭಿಸಲಾಗುವುದೆ?

ಶ್ರೀ ಬಸವರಾಜ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

ಉತ್ತರ

ಅ) ಸರ್ಕಾರ ಗಂಬೀರವಾಗಿ ಪರಿಗಣಿಸಿದೆ.

ಆ) ಗಲಗಲಿ ಬ್ಯಾರೇಜಿನ ಎತ್ತರವನ್ನು ಎರಡು ಮೀಟರ್‌ನಷ್ಟು ಹೆಚ್ಚಿಸಲು ಸರ್ಕಾರದ ಪತ್ರಸಂಖ್ಯೆಃಜಸಂಇ 39 ಎನ್‌ಐಎನ್ 2012 ದಿನಾಂಕ:19/06/2012ರಡಿ ನಿರ್ದೇಶನ ನೀಡಲಾಗಿದೆ. ಅದರಂತೆ ಗಲಗಲಿ ಬ್ಯಾರೇಜನ್ನು ಎತ್ತರಿಸುವ ಕಾಮಗಾರಿಯ ರೇಖಾ ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು, ನಿಗಮದಡಿ ಸಮಗ್ರವಾಗಿ ತಾಂತ್ರಿಕ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ.